**ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ-ಕರ್ನಾಟಕ**

**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಇಲಾಖೆ, ಕೆ.ಆರ್. ಸರ್ಕಲ್, ನೃಪತುಂಗರಸ್ತೆ, ಬೆಂಗಳೂರು-560001**

**ಸಂಖ್ಯೆ: RMSA**/ಮಾ.ಶಾ.(ಆ.ವಿ)ಬ್ಯಾ.ಖಾ/20/2010-11 ದಿನಾಂಕ: 7-10-2011

**ಸುತ್ತೋಲೆ**

ವಿಷಯ: ರಾಜ್ಯದಲ್ಲಿನ ಆದರ್ಶ ವಿದ್ಯಾಲಯ(ಮಾದರಿ ಶಾಲೆಗಳು)ಗಳಲ್ಲಿನ ಬ್ಯಾಂಕ್ ಉಳಿತಾಯ ಖಾತೆ ನಿರ್ವಹಣೆ ಕುರಿತು.

ಉಲ್ಲೇಖ: ಆರ್.ಎಂ.ಎಸ್.ಎ/ಮಾ.ಶಾ.(ಆ.ವಿ)/20/2010-11, ದಿನಾಂಕ: 12.07.2010,

****** * ******

ರಾಜ್ಯದಲ್ಲಿನ 74 ಆದರ್ಶ ವಿದ್ಯಾಲಯ(ಮಾದರಿ ಶಾಲೆಗಳು) ಗಳಲ್ಲಿ ಮೇಲಿನ ಉಲ್ಲೇಖದಂತೆ ಚೆಕ್‌ಬುಕ್ ಸಹಿತ ಜಂಟಿ ಉಳಿತಾಯ ಖಾತೆಯನ್ನು ತೆರೆಯಲು ಈಗಾಗಲೇ ತಿಳಿಸಲಾಗಿದೆ. ಸದರಿ ಶಾಲೆಗಳಲ್ಲಿ ಹಣಕಾಸಿನ ಕಾರ್ಯ ನಿರ್ವಹಣೆಯು ಮುಖ್ಯಶಿಕ್ಷಕರು ಹಾಗೂ ಹಿರಿಯ ಸಹಶಿಕ್ಷಕರು(ಇಲಾಖಾ ನಿಯೋಜಿತ) ಇವರುಗಳ ಜಂಟಿ ಖಾತೆಯಲ್ಲಿ ನಿರ್ವಹಣೆಯಾಗುತ್ತಿತ್ತು.

ಪ್ರಸ್ತುತ ಆಸ್ಟ್ರಿಕ್ಸ್ ಪ್ರೈವೇಟ್ ಲಿಮಿಟೆಡ್ ಈ ಸಂಸ್ಥೆಯಿಂದ ಹೊರಗುತ್ತಿಗೆ ಆಧಾರದ ಮೇಲೆ ಶಿಕ್ಷಕರ ಸೇವೆ ಪಡೆದಿರುವುದರಿಂದ ಇಲಾಖಾ ನಿಯೋಜಿತ ಶಿಕ್ಷಕರು ಬಿಡುಗಡೆಯಾಗಬೇಕಾಗಿರುತ್ತದೆ. ಆದ್ದರಿಂದ ಬದಲಾದ ಸಂಧರ್ಭದಲ್ಲಿ ಜಂಟಿಖಾತೆ ನಿರ್ವಹಣೆ ಕುರಿತು ಶಾಲಾ ಮುಖ್ಯಶಿಕ್ಷಕರು ಸ್ಪಷ್ಟನೆಯನ್ನು ಕೋರಿರುತ್ತಾರೆ.

ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಇಲಾಖಾ ವತಿಯಿಂದ ಕಾರ್ಯ ನಿರ್ವಹಿಸುತ್ತಿರುವ ನಿಯೋಜಿತ ಹಿರಿಯ ಸಹಶಿಕ್ಷಕರನ್ನು ಹಾಗೆಯೇ ಅದೇ ಸ್ಥಾನದಲ್ಲಿ ಮುಂದುವರೆಸಲು ಸೂಚಿಸಲಾಗಿದೆ.

ಆಸ್ಟ್ರಿಕ್ಸ್ ಪ್ರೈವೇಟ್ ಲಿಮಿಟೆಡ್ ರವರು ವಿಷಯವಾರು ಮಾನವ ಸಂಪನ್ಮೂಲವನ್ನು ಒದಗಿಸದೇ ಇದ್ದ ಸಂದರ್ಭದಲ್ಲಿ ಪ್ರಸ್ತುತ ನಿರ್ವಹಿಸುತ್ತಿರುವ ವಿಷಯವಾರು ಶಿಕ್ಷಕರನ್ನು ಮುಂದುವರೆಸುವುದು. ಆಸ್ಟ್ರಿಕ್ಸ್ ಪ್ರೈವೇಟ್ ಲಿಮಿಟೆಡ್ ಈ ಸಂಸ್ಥೆಯಿಂದ ಆಯ್ಕೆಗೊಂಡು ಶಾಲಾ ಕರ್ತವ್ಯಕ್ಕೆ ಹಾಜರದ ನಂತರ ವಿಷಯವಾರು ಇಲಾಖಾ ಶಿಕ್ಷಕರನ್ನು ಬಿಡುಗಡೆ ಮಾಡುವುದು.

ಶಾಲೆಯ ಜಂಟಿ ಉಳಿತಾಯ ಖಾತೆಯು ಈಗಾಗಲೇ ಮುಖ್ಯಶಿಕ್ಷಕರು ಹಾಗೂ ಇಲಾಖಾ ಹಿರಿಯ ಸಹಶಿಕ್ಷಕರಿಂದ ನಿರ್ವಹಿಸಲ್ಪಟ್ಟಿರುತ್ತದೆ. ಆದರೆ ಬದಲಾದ ಸಂದರ್ಭದಲ್ಲಿ ಈ ಜಂಟಿ ಖಾತೆಯನ್ನು ಶಾಲಾ ಮುಖ್ಯಶಿಕ್ಷಕರು ಹಾಗೂ ಸಂಬಂಧಪಟ್ಟ ತಾಲ್ಲೂಕಿನ ಕ್ಷೇತ್ರಶಿಕ್ಷಣಾಧಿಕರಿಗಳು ನಿರ್ವಹಿಸಲು ಮಾರ್ಪಡಿಸಿ ಆದೇಶ ಹೊರಡಿಸಿದೆ.

SD/-

**ನಿರ್ದೇಶಕರು**
**ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ**
**ಬೆಂಗಳೂರು**

**ಪ್ರತಿಗಳು:**

1. ಜಿಲ್ಲಾ ಉಪನಿರ್ದೇಶಕರುಗಳಿಗೆ ಸೂಕ್ತ ಕ್ರಮಕ್ಕಾಗಿ ಕ್ಷೇತ್ರಶಿಕ್ಷಣಾಧಿಕಾರಿಗೆ ನಿರ್ದೇಶನ ನಿಡುವ ಸಲುವಾಗಿ
2. ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ ಮತ್ತು ಅನುಪಾಲನೆಗಾಗಿ.
3. ಆದರ್ಶ ವಿದ್ಯಾಲಯ ಶಾಲೆಗಳ ಮುಖ್ಯ ಶಿಕ್ಷಕರುಗಳಿಗೆ ಅಗತ್ಯ ಕ್ರಮಕ್ಕಾಗಿ.
4. ಕಛೇರಿ ಪ್ರತಿ